**ಪದ್ಮನಾಭ ಭಟ್**

## ನೀಲಿ ಚುಕ್ಕಿಯ ನೆರಳು





ಸಂಧಿಸದ ತೀರ, ಸೇರಲಾರದಷ್ಟು ದೂರ, ಅಗಲುವಿಕೆಯಿಂದ ಹುಟ್ಟಿಕೊಂಡ ಮನೋಭಾರ, ಅವುಗಳಿಂದ ಹುಟ್ಟಿಕೊಂಡ ವಿರಹ–ವಿಷಾದಗಳೇ ಇಲ್ಲಿನ ಬಹುತೇಕ ಪದ್ಯಗಳಲ್ಲಿ ಜಿನುಗುತ್ತವೆ. ಮಧುರಾಣಿ ಎಚ್.ಎಸ್. ಅವರ ಎರಡನೇ ಕವನ ಸಂಕಲನದ ಪದ್ಯಗಳು, ಕಾವ್ಯಗುಣಕ್ಕಿಂತಲೂ ಭಾವತೀವ್ರತೆಯಿಂದಲೇ ಹೆಚ್ಚು ಸೆಳೆಯುತ್ತವೆ. 'ಗಾಳಿಗೆ ಹಾರಿ ನಿಸೂರಾದ ಬೂದಿಯ ಕಣದಂತೆ' ಹಗುರವಾಗಿ ತೇಲುವ ಈ ಕವಿತೆಗಳಲ್ಲಿ ಅನಿರೀಕ್ಷಿತವಾಗಿ ಕೆಳಗಿಳಿದು ಮನಸ್ಸೊಳಗೆ ಅಂಟಿಕೂತುಬಿಡಬಲ್ಲ ಹಲವು ಸಾಲುಗಳಿವೆ. 'ವಿರಹ ಕೊಟ್ಟಷ್ಟು ಪದಗಳನ್ನು ಸುಖವೆಲ್ಲಿ ಕೊಟ್ಟಿತ್ತು ಹೇಳು' ಎಂದು ವಿಷಾದದಿಂದ ಹೇಳುವ ಕವಿಯೇ 'ಅಳತೆಗೆ ದಕ್ಕುವುದಿಲ್ಲವೆಂದರೆ ಗರ್ವಿಸಬೇಕು / ಕೈ ಮೀರಿ ಹೋಗಿದ್ದಾಳೆಂದರೆ ಖುಷಿ ಪಡಬೇಕು / ನೀತಿ ನಿಯಮದ ಇಕ್ಕಳದಲ್ಲಿ ಸಿಕ್ಕದವಳೆಂದು ಹಳಿದರೆ / ಸಂತಸ ಪಡವೇಕಲ್ಲವೇ' ಎಂದು ದಿಟ್ಟವಾಗಿ ಪ್ರಶ್ನಿಸಿಕೊಳ್ಳಬಲ್ಲರು. 'ನನ್ನ ಅಡುಗೆಮನೆ' ಪದ್ಯದ ಈ ಸಾಲುಗಳನ್ನು ಮಧುರಾಣಿಯವರ ಕಾವ್ಯಕೃಷಿಗೂ ಅನ್ವಯಿಸಬಹುದು: 'ಇರು, ಸ್ವಲ್ಪ ಸಮಯ ಸರಿಯಲಿ, / ಆತ್ಮವಿನ್ನೂ ಬೇಗುದಿಯಲ್ಲಿ ಬೇಯುತಿದೆ, ಬೇಯಲಿ / ಬೆಂದು ಮಾಯೆ ಹರಿದ ಮರುಕ್ಷಣವೇ / ತಣ್ಣಗೆ ಸುಡುವ ದಾವಾನಲ ಆರಿದರೆ / ರಸ ಪಕ್ವ ಹಿತವಾದ ಉಣಿಸು, / ನನಗೆ ನಾನು ದಕ್ಕುವ ಪರಿಮಳದಂಥಾ ಅಡುಗೆ.'

**ನೀಲಿ ಚುಕ್ಕಿಯ ನೆರಳು; ಲೇ: ಮಧುರಾಣಿ ಎಚ್.ಎಸ್.; ಬೆ: ₹120; ಪ್ರ.: ಬಹುರೂಪಿ; ದೂ: 7019182729**

---

## ತರವಲ್ಲ ತಗಿ ನಿನ್ನ ತಂಬೂರಿ ಸ್ವರ...




ಕನ್ನಡದ ಮುಖ್ಯ ವಿಮರ್ಶಕರಲ್ಲಿ ಒಬ್ಬರಾದ ಮೇಟಿ ಮಲ್ಲಿಕಾರ್ಜುನ ಅವರ ವಿಮರ್ಶಾತ್ಮಕ ಬರಹಗಳ ಸಂಕಲನವಿದು. ವಿಮರ್ಶೆ ಅಂದಾಕ್ಷಣ ಸಾಹಿತ್ಯ ಕೃತಿಗಳ ವಿಮರ್ಶೆ ಅಂದುಕೊಳ್ಳಬೇಕಿಲ್ಲ. ಸಾಹಿತ್ಯದ ಜೊತೆಗೆ ಸಂಸ್ಕೃತಿ, ರಾಜಕಾರಣ, ಸಿನಿಮಾ, ಇತಿಹಾಸ, ಸ್ತ್ರೀ ಸಂವೇದನೆ – ಹೀಗೆ ಹಲವು ಕ್ಷೇತ್ರಗಳ ನಡುವೆ ಹಾಯುತ್ತ ಸಾಗುವ ಇಲ್ಲಿನ ಬರಹಗಳಲ್ಲಿ ಎದ್ದು ಕಾಣುವ ಗುಣಗಳು – ಶ್ರದ್ಧೆ ಮತ್ತು ಸೂಕ್ಷ್ಮಜ್ಞತೆ. ಪರಿಭಾಷೆಗಳ ಹಂಗಿಗಿಂತಲೂ ಅರಿವಿನ ದೊಂದಿ ಹಿಡಿದು ಸಾಗುವುದೇ ಮುಖ್ಯ ಎಂದು ನಂಬಿ ಬರೆದಿರುವ ಇಲ್ಲಿನ ಲೇಖನಗಳನ್ನು ಕನ್ನಡ ಸಾಂಸ್ಕೃತಿಕ ಲೋಕದ ವಿದ್ಯಮಾನಗಳಿಗೆ ಸಹೃದಯನೊಬ್ಬನ ಸ್ಪಂದನಗಳಾಗಿಯೂ ನೋಡಬಹುದು. ಹಿರಿಕಿರಿಯ ಲೇಖಕರ ಕೃತಿಗಳ ಕುರಿತು ಬರೆದಿರುವ ಬರಹಗಳ ಜೊತೆಗೆ, ಸಮಕಾಲೀನ ರಾಜಕೀಯ ವಿದ್ಯಮಾನಗಳಿಗೆ ಅವರು ನೀಡಿರುವ ಸೂಕ್ಷ್ಮವೂ ತೀಕ್ಷ್ಣವೂ ಆಗಿರುವ ಪ್ರತಿಕ್ರಿಯೆಗಳೂ ಇಲ್ಲಿವೆ. ಹಲಬಗೆಯ ನೋಟ, ವಿಶ್ಲೇಷಣೆಗಳನ್ನು ಒಳಗೊಂಡಿರುವ ಈ 'ತಂಬೂರಿ ಸ್ವರ', ಗಂಭೀರ ಆಲಿಕೆಯನ್ನೂ ಬೇಡುತ್ತದೆ.

**ತರವಲ್ಲ ತಗಿ ನಿನ್ನ ತಂಬೂರಿ ಸ್ವರ... ; ಲೇ: ಮೇಟಿ ಮಲ್ಲಿಕಾರ್ಜುನ; ಬೆ: ₹140; ಪ್ರ: ನವಕರ್ನಾಟಕ; ದೂ: 080 22161900**